8ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.

ಕರ್ನಾಟಕ ಸರ್ಕಾರ
ಖಜಾನೆ ಆಯುಕ್ತರ ಕಾರ್ಯಾಲಯ
ನೂತನ ಪಿಂಚಣಿ ಯೋಜನೆ ಘಟಕ

ದೂರವಾಣಿ :080–22864180
080–22866405
ಇ–ಮೇಲ್:nps.-cell@karnataka.gov.in

ಸಂ: ಖನಿ/ಎನ್.ಪಿ.ಎಸ್/01/06/2019–20

ದಿನಾಂಕ: 16.12.2019

ರಾಜ್ಯದ ಎಲ್ಲಾ ಖಜಾನೆಗಳ ಪ್ರಭಾರಾಧಿಕಾರಿಗಳಿಗೆ,

ಮಾನ್ಯರೇ,

ವಿಷಯ: ದಿನಾಂಕ 01.04.2019 ರಿಂದ ಶೇಕಡಾ 14 ಕ್ಕೆ ಹೆಚ್ಚಿಸಲಾದ ಸರ್ಕಾರದ ಎನ್.ಪಿ.ಎಸ್ ವಂತಿಗೆಯ ಬಾಕಿ ಪಾವತಿ ಬಗ್ಗೆ.
ಉಲ್ಲೇಖ: (1) ಸರ್ಕಾರದ ಆದೇಶ ಸಂಖ್ಯೆ: ಆಇ 37 ಪಿಇಎನ್ 2019 ದಿನಾಂಕ 31.08.2019.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಖಜಾನೆಗಳಲ್ಲಿ ವೇತನ ಸೆಳೆಯುತ್ತಿರುವ ರಾಜ್ಯದ ಎಲ್ಲಾ ಡಿ.ಡಿ.ಓ ಗಳ ಗಮನಕ್ಕೆ ಸುತ್ತೋಲೆಯನ್ನು ಹೊರಡಿಸಿದ್ದು, ಪ್ರತಿಯನ್ನು ಈ ಪತ್ರಕ್ಕೆ ಲಗತ್ತಿಸಲಾಗಿದೆ. ಸದರಿ ಸುತ್ತೋಲೆಯನ್ನು ಖಜಾನೆಗಳ ಸೂಚನಾ ಫಲಕದಲ್ಲಿ ಪ್ರಕಟಿಸಲು ಹಾಗೂ ಎಲ್ಲಾ ಡಿ.ಡಿ.ಓ ಗಳ ಗಮನಕ್ಕೆ ತರಲು ತಿಳಿಸಿದೆ.

ತಮ್ಮ ನಂಬುಗೆಯ,

ಖಜಾನೆ ಆಯುಕ್ತರು,
ಬೆಂಗಳೂರು.

ಪ್ರತಿ:

1. ಅಪರ ನಿರ್ದೇಶಕರು, ಖಜಾನೆ ಗಣಕ ಜಾಲ ಕೇಂದ್ರ ಬೆಂಗಳೂರು, ಇವರಿಗೆ ಮಾಹಿತಿಗಾಗಿ ಹಾಗೂ ಖಜಾನೆಗಳ ಅಂತರ್ಜಾಲದಲ್ಲಿ ಪ್ರಕಟ ಪಡಿಸಲು.

Scanned by CamScanner
Scanned by CamScanner

8ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.

ಕರ್ನಾಟಕ ಸರ್ಕಾರ
ಖಜಾನೆ ಆಯುಕ್ತರ ಕಾರ್ಯಾಲಯ
ನೂತನ ಪಿಂಚಣಿ ಯೋಜನೆ ಘಟಕ

ದೂರವಾಣಿ :080-22864180
080-22866405
ಇ-ಮೇಲ್:nps.-cell@karnataka.gov.in

ಸಂ: ಖನಿ/ಎನ್.ಪಿ.ಎಸ್/01/06/2019-20

ದಿನಾಂಕ: 16.12.2019

## ಸುತ್ತೋಲೆ

ವಿಷಯ: ದಿನಾಂಕ 01.04.2019 ರಿಂದ ಶೇಕಡಾ 14 ಕ್ಕೆ ಹೆಚ್ಚಿಸಲಾದ ಸರ್ಕಾರದ ಎನ್.ಪಿ.ಎಸ್ ವಂತಿಗೆಯ ಬಾಕಿ ಪಾವತಿ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಆಇ 37 ಪಿಇಎನ್ 2019 ದಿನಾಂಕ 31.08.2019.

*******

1. ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಎನ್.ಪಿ.ಎಸ್ ಗೆ ಒಳಪಡುವ ಸರ್ಕಾರಿ ನೌಕರರಿಗೆ ದಿನಾಂಕ 01.04.2019 ರಿಂದ ಅನ್ವಯಿಸುವಂತೆ ಸರ್ಕಾರದ ವಂತಿಗೆಯನ್ನು ಶೇಕಡಾ 10 ರಿಂದ ಶೇಕಡಾ 14 ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

2. ದಿನಾಂಕ 01.04.2019 ರಿಂದ ಹೆಚ್ಚಿಸಲಾದ ಶೇಕಡಾ 14 ರ ಸರ್ಕಾರದ ವಂತಿಗೆ ಸಂಬಂಧ ನೌಕರರ ಪ್ರಾನ್ ಖಾತೆಗೆ ಸಂದಾಯವಾಗುವುದು ಬಾಕಿ ಇರುವ ವ್ಯತ್ಯಾಸದ ಶೇಕಡಾ 4 ರ ಸರ್ಕಾರದ ವಂತಿಗೆ ಪಾವತಿ ಬಗ್ಗೆ ಹೆಚ್.ಆರ್.ಎಂ.ಎಸ್ ನಲ್ಲಿ ತಂತ್ರಾಂಶವನ್ನು ಸಿದ್ದಪಡಿಸಿದೆ.

3. ಡಿ.ಡಿ.ಓ ಗಳು ಹೆಚ್.ಆರ್.ಎಂ.ಎಸ್ ನಲ್ಲಿ ಶೇಕಡಾ 10 ರ ಸರ್ಕಾರದ ವಂತಿಗೆಯೊಂದಿಗೆ ಈಗಾಗಲೇ ಜನರೇಟ್ ಮಾಡಿರುವ ವೇತನ ಮತ್ತು ವೇತನ ಸಂಬಂಧಿತ ಅರಿಯರ್ ಬಿಲ್‌ಗಳಲ್ಲಿನ, ನೌಕರರ ಪ್ರಾನ್ ಖಾತೆಗೆ ಸಂದಾಯವಾಗಿರುವ ವಂತಿಗೆಗಳ ಆಧಾರದ ಮೇಲೆ ವ್ಯತ್ಯಾಸದ ಶೇಕಡಾ 4 ರ ಸರ್ಕಾರದ ವಂತಿಗೆಗೆ ಷೆಡ್ಯೂಲ್-X (Schedule 10) ಅನ್ನು ಪ್ರತಿಯೊಂದು ಡಿ.ಡಿ.ಓ ಗಳ ಲಾಗಿನ್‌ನಲ್ಲಿ ಲಭ್ಯಪಡಿಸಲಾಗಿದೆ.

4. ಡಿ.ಡಿ.ಓ ಗಳು ತಮ್ಮ ಹೆಚ್.ಆರ್.ಎಂ.ಎಸ್ ಲಾಗಿನ್ ನಲ್ಲಿ Home ⟹ NPS ⟹ Schedule-X (4% Difference) Generation ⟹ Click on approve ಈ ಮಾರ್ಗವನ್ನು ಅನುಸರಿಸಿ ಷೆಡ್ಯೂಲ್‌ಗಳನ್ನು approve ಮಾಡತಕ್ಕದ್ದು.

5. ಡಿ.ಡಿ.ಓ ಗಳು ಸದರಿ ಷೆಡ್ಯೂಲ್-X ಅನ್ನು ಪ್ರಥಮ ಆದ್ಯತೆಯಲ್ಲಿ ಹೆಚ್.ಆರ್.ಎಂ.ಎಸ್ ನಲ್ಲಿ ಜನರೇಟ್ ಮಾಡಿ approve ಮಾಡತಕ್ಕದ್ದು.

6. ಡಿ.ಡಿ.ಓ ಗಳು ಷೆಡ್ಯೂಲ್-X ಗಳನ್ನು approve ಮಾಡುವ ಕಾರ್ಯವನ್ನು ದಿನಾಂಕ **25.12.2019** ರೊಳಗೆ ಪೂರ್ಣಗೊಳಿಸತಕ್ಕದ್ದು.

7. ಮೇಲಿನಂತೆ ಡಿ.ಡಿ.ಓ ಗಳಿಂದ approve ಮಾಡಲಾದ ಷೆಡ್ಯೂಲ್-X ಗಳು ಎನ್.ಪಿ.ಎಸ್ ಘಟಕದ ಲಾಗಿನ್ ನಲ್ಲಿ ಲಭ್ಯವಾಗುವುದು.

8. ಎನ್.ಪಿ.ಎಸ್ ಘಟಕದಿಂದ ಷೆಡ್ಯೂಲ್-X ಗಳನ್ನು ಕ್ರೋಢೀಕರಿಸಿ, ಸದರಿ ಷೆಡ್ಯೂಲ್‌ಗಳಲ್ಲಿನ ಶೇಕಡಾ 4 ರ ವ್ಯತ್ಯಾಸದ ಸರ್ಕಾರದ ವಂತಿಗೆಯನ್ನು ಎನ್.ಪಿ.ಎಸ್ ನೌಕರರ ಪ್ರಾನ್ ಖಾತೆಗೆ ಸಂದಾಯವಾಗುವಂತೆ ಕ್ರಮ ತೆಗೆದುಕೊಳ್ಳುವರು.

Scanned by CamScanner

Scanned by CamScanner

9. ಶೇಕಡಾ 4 ವ್ಯತ್ಯಾಸದ ಪಾವತಿಯನ್ನು ಕೇಂದ್ರೀಕೃತವಾಗಿ ಎನ್.ಪಿ.ಎಸ್ ಘಟಕದಿಂದ ಮಾಡಲ್ಪಡುತ್ತದೆ.

10. ಡಿ.ಡಿ.ಓ ಗಳು ಷೆಡ್ಯೂಲ್-X ಅನ್ನು approve ಮಾಡುವುದನ್ನು ವಿಳಂಬ ಮಾಡಿದಲ್ಲಿ ವಿಳಂಬದಿಂದ ಉಂಟಾಗುವ ಯಾವುದೇ ಲಾಭ ನಷ್ಟಗಳಿಗೆ ಸಂಬಂಧ ಪಟ್ಟ ಡಿ.ಡಿ.ಓ ರವರೇ ವೈಯಕ್ತಿಕವಾಗಿ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

ಖಜಾನೆ ಆಯುಕ್ತರು,
ಬೆಂಗಳೂರು.

ಗೆ,

**ರಾಜ್ಯದ ಎಲ್ಲಾ ಹಣ ಸೆಳೆಯುವ ಹಾಗೂ**
**ಬಟವಾಡೆ ಮಾಡುವ ಅಧಿಕಾರಿಗಳಿಗೆ.**

ಪ್ರತಿಯನ್ನು:

1) ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, 2ನೇ ಮಹಡಿ, ವಿಧಾನಸೌಧ, ಬೆಂಗಳೂರು. ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಮುಖ್ಯ ಕಾರ್ಯನಿರ್ವಾಹಣಾಧಿಕಾರಗಳು, ಇ-ಆಡಳಿತ ಕೇಂದ್ರ, ಹೆಚ್.ಆರ್.ಎಂ.ಎಸ್, ಬಹುಮಹಡಿ ಕಟ್ಟಡ, ಬೆಂಗಳೂರು.
3) ಯೋಜನಾ ನಿರ್ದೇಶಕರು, ಇ-ಆಡಳಿತ ಕೇಂದ್ರ, ಹೆಚ್.ಆರ್.ಎಂ.ಎಸ್,ಬಹುಮಹಡಿ ಕಟ್ಟಡ, ಬೆಂಗಳೂರು.

Scanned by CamScanner
Scanned by CamScanner